# ಪರಿಸರ ಸ್ನೇಹಿ ಕ್ರಿಮೇಶನ್



ತಿನ್ನುವ ಆಹಾರ ಪರಿಸರ ಸ್ನೇಹಿ. ತೊಡುವ ಉಡುಪು, ತಲೆಯ ಮೇಲಿನ ಸೂರು, ಓಡಾಡುವ ವಾಹನ, ಮೆಟ್ಟುವ ಚಪ್ಪಲಿ, ಬರೆಯುವ ಪೆನ್ನು, ಪೇಪರ್.. ಒಟ್ಟಿನಲ್ಲಿ ಬದುಕೇ ಪರಿಸರ ಸ್ನೇಹಿ. ಹೀಗಿರುವಾಗ ಸಾವು ಕೂಡ ಪರಿಸರ ಸ್ನೇಹಿಯಾಗದಿದ್ದರೆ ಹೇಗೆ? ಇದಕ್ಕೂ ಸ್ಕಾಟ್‌ಲೆಂಡ್‌ನ ಕಂಪೆನಿಯೊಂದು ಉತ್ತರ ಕಂಡುಹಿಡಿದಿದೆ. ಅಗ್ನಿಗೆ ಆಹುತಿಯಾಗುವ ಮೃತಶರೀರ ಹೊರಸೂಸುವ ಹಾನಿಕಾರಕ ರಾಸಾಯನಿಕ ವಾತಾವರಣ ಸೇರಿ ಇನ್ನಷ್ಟು ಕಲುಷಿತಗೊಳ್ಳುವುದನ್ನು ತಪ್ಪಿಸಲು ಪರ್ಯಾಯವೊಂದನ್ನು ರೂಪಿಸಿದೆ. ಸುಡುವ ಅಥವಾ ಹೂತು ಹಾಕುವ ಪ್ರಕ್ರಿಯೆಗೆ ಬದಲಿಯಾಗಿ ಬಂದಿರುವ ಇದೇ 'ರೆಸೊಮೇಶನ್'. ಇದನ್ನು ನಡೆಸುವ ಉಪಕರಣ 'ರೆಸೊಮೇಟರ್'.

ಆಲ್ಕಲೈನ್ ಹೈಡ್ರೊಲಿಸಿಸ್ ಎಂಬ ಸರಳ ರಾಸಾಯನಿಕ ಪ್ರಕ್ರಿಯೆಯನ್ನು ಇದರಲ್ಲಿ ಅಳವಡಿಸಲಾಗಿದೆ. ಮೃತದೇಹವನ್ನು ರೇಷ್ಮೆ ಚೀಲದೊಳಗೆ ಹಾಕುವುದು. ಅದನ್ನು ಲೋಹದ ಜಾಲರಿಯಲ್ಲಿ ಇರಿಸಿದ ನಂತರ ರೆಸೊಮೇಟರ್‌ನ ಕ್ಯಾಪ್ಸೂಲ್ ಮಾದರಿಯ ಕೋಣೆಯ ಒಳಗೆ ಇಡಲಾಗುವುದು. ಈ ರೆಸೊಮೇಟರ್‌ನಲ್ಲಿ ನಡೆಯುವುದು ಅಧಿಕ ಮಟ್ಟದ ನೀರು ಮತ್ತು ರಾಸಾಯನಿಕ ಪ್ರಕ್ರಿಯೆ. ಈ ರಾಸಾಯನಿಕ ಪೊಟ್ಯಾಸಿಯಂ ಹೈಡ್ರಾಕ್ಸೈಡ್. ಇದು ಅಮ್ಲಕ್ಕೆ ವಿರುದ್ಧವಾದ ಪ್ರತ್ಯಾಮ್ಲ. ನೀರು ಕಾದಂತೆ (362 ಡಿ.ಫ್ಯಾ.) ರಾಸಾಯನಿಕ ಪ್ರಕ್ರಿಯೆ ಶುರುವಾಗುತ್ತದೆ. ದೇಹದ ಅಂಗಾಂಗಗಳು ಚೂರುಚೂರಾಗಿ ಈ ದ್ರಾವಣದಲ್ಲಿ ಕರಗುತ್ತವೆ. ಉಳಿಯವುದು ಮೃದುವಾದ ಎಲುಬೊಂದೇ. ಈ ಎಲುಬನ್ನು ನಂತರ ಪುಡಿ ಮಾಡಿ ಸಂಬಂಧಪಟ್ಟವರಿಗೆ ನೀಡಲಾಗುವುದು. ಒಟ್ಟು ಪ್ರಕ್ರಿಯೆಗೆ ತಗಲುವ ಸಮಯ 2–3 ತಾಸಷ್ಟೆ.

ದೇಹದ ಅಂಗಾಂಗಗಳು ಕರಗಿದ ಕಂದು ಬಣ್ಣದ ದ್ರಾವಣ (ಅಮಿನೊ ಆಮ್ಲ, ಪೆಪ್ಟೈಡ್, ಸಕ್ಕರೆ ಮತ್ತು ಉಪ್ಪು)ವನ್ನು ನಗರಾಡಳಿತದ ಜಲ ಸಂಸ್ಕರಣ ಘಟಕಕ್ಕೆ ಬಿಡಲಾಗುವುದು.

ಕಟ್ಟಿಗೆ ರಾಶಿಯಲ್ಲಿ ಹೆಣ ಸುಡುವ ಪ್ರಕ್ರಿಯೆಯಂತೆ ಇದೂ ಕೂಡಾ. ಆದರೆ ಕಟ್ಟಿಗೆಯಲ್ಲಿ ಸುಡುವಾಗ ಹಸಿರುಮನೆ ಅನಿಲಗಳು ಹೊರಹೊಮ್ಮುತ್ತವೆ. ಇವು ವಾತಾವರಣದ ಓಝೋನ್ ಪದರವನ್ನು ಘಾಸಿಗೊಳಿಸುತ್ತವೆ. ಜೊತೆಗೆ ಇತ್ತೀಚೆಗೆ ಹಲ್ಲಿನ ಕುಳಿಯನ್ನು ತುಂಬಿಸಿಕೊಳ್ಳುವುದು ಸಾಮಾನ್ಯ. ಇದಕ್ಕೆ ಅಪಾಯಕಾರಿ ಪಾದರಸ ಬಳಸುತ್ತಾರೆ. ಸುಟ್ಟಾಗ ಇದು ಕೂಡಾ ವಾತಾವರಣ ಸೇರುತ್ತದೆ. ಆದರೆ ರೆಸೊಮೇಶನ್‌ನಲ್ಲಿ ಈ ಅಪಾಯಗಳ್ಯಾವುವೂ ಇರುವುದಿಲ್ಲ ಎನ್ನುತ್ತಾರೆ ರೆಸೊಮೇಶನ್ ಲಿ. ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕರಾದ ಸ್ಯಾಂಡಿ ಸುಲ್ಲಿವನ್. ಈ ಪಾದರಸವನ್ನು ಪ್ರತ್ಯೇಕಿಸಲಾಗುತ್ತದೆ.

ಈ ವ್ಯವಸ್ಥೆಯನ್ನು ಸದ್ಯ ಫ್ಲಾರಿಡಾ, ಮಿನ್ನೆಸೋಟ, ಮೇರಿಲ್ಯಾಂಡ್, ಒರೆಗಾನ್, ಕೊಲೊರ್ಯಾಡೊ ಮೊದಲಾದ ಅಮೆರಿಕದ ಪ್ರಾಂತ್ಯಗಳಲ್ಲಿ ಬಳಸಲಾಗುತ್ತಿದ್ದು ಇಂಗ್ಲೆಂಡ್ ಕೂಡಾ ಆಸಕ್ತಿ ತೋರಿಸಿದೆ.

■ ಎಸ್ಸೆಚ್



ಇನ್ನೂ ಅಭಿವೃದ್ಧಿ ಕಾರ್ಯ ಮುಗಿದಿಲ್ಲ.. ನನ್ನ ಬಂಗಲೆಯ ಕಾಂಪೌಂಡ್ ಬಾಕಿ ಇದೆ. ಅಳಿಯನ ಮನೆ ಅರ್ಧಕ್ಕೆ ನಿಂತಿದೆ....




ಕುಳಿತುಕೊಳ್ಳಲು 'ಕಮಲ'ವೇ ಇದೆ. ಆದರೆ ಯಾವ 'ಬಣ'ಕ್ಕೆ ಸೇರಿದ್ದೆಂದು ತಿಳಿಯುತ್ತಿಲ್ಲ.. ದೇವ..




'ಲೋಕಪಾಲ'ಕ್ಕೆ ಪೂರ್ಣ ಬೆಂಬಲ! ಜಾರಿಗೆ ಬಂದ ಮೇಲೆ ಫ್ರೀಯಾಗಿ ಕೆಲಸ ಮಾಡಿಕೊಡ್ತೀನಿ. ಅಲ್ಲೀತನಕ 'ಮಾಮೂಲಿ'ನಂತೆ ಆಯ್ತಾ!